ಮೈಸೂರು ಡಿಸ್ಟ್ರಿಕ್ಟು.

ಮೈಸೂರು ಡಿಸ್ಟ್ರಿಕ್ಟು ಜಡ್ಜಿಯವರ ಕೋರ್ಟಿನಲ್ಲಿ.

1889ನೇ ಇಸವಿ ಆರ್ಜೀ ನಂಬರ್ 30.

ಮೃತಪಟ್ಟ ಕರೇಗೌಡರ ಆಸ್ತೀ ವಿಷಯದಲ್ಲಿ.

ಆರ್ಜೀದಾರು) 1ನೇ ಜವರೇಗೌಡ, 2ನೇ ಜವನ, 3ನೇ ಕಳಸಾ, 4ನೇ ನಂಜಾ 2–3–4ನೇ ಮೈನರ್ ಗಾರ್ಡಿಯರ್ 1ನೇ ಆರ್ಜಿದಾರ ಜವರೇಗೌಡ ಮೃತಪಟ್ಟ ಸದರೀ ಕರೇಗೌಡರಿಗೆ ಮಕ್ಕಳು ಆಗಬೇಕೆಂಬ ಹಕ್ಕುದಾರೀ ಮೇಲೆ ಚಾಮರಾಜನಗರದ ತಾಲ್ಲೂಕು ಕಸಬಾ ಹೋಬಳಿ ಹಟ್ಟುವನ್ನೀ ಸ್ಥಳದ ಸದರಿ ಜವರೇಗೌಡರು ಸದರಿ ವಾಸಸ್ಥರಾಗಿ ಮೃತಪಟ್ಟ ಕರೇಗೌಡರ ಜಿಂದಗಿ ಬಗ್ಯಾಗಿ ಬರತಕ್ಕ 500 ರೂಪಾಯಿಗಳ ಸಾಲಗಳನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ಜವರೇಗೌಡರ ಅರ್ಜಿಯನ್ನು 1889ನೇ ಇಸವಿ ಮಾರ್ಚ ತಿಂಗಳು ತಾರೀಖು 18ರಲ್ಲು ಕೇಳಿ ಸರಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೆ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಕರೇಗೌಡರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1889ನೇ ಇಸವಿ ಆರ್ಜೀ ನಂಬರ್ 33.

ಮೃತಪಟ್ಟ ಗುರುಮೂರ್ತಿಜೋಯಿಸರ ಆಸ್ತೀ ವಿಷಯದಲ್ಲಿ—

ಆರ್ಜೀದಾರು) ತಿಪ್ಪಯ್ಯನವರು, ಮೃತಪಟ್ಟ ಸದರೀ ಗುರುಮೂರ್ತಿಜೋಯಿಸರಿಗೆ ಮಗ ಆಗಬೇಕೆಂಬ ಹಕ್ಕುದಾರೀ ಮೇಲೆ ತಿರುಮಕೂಡ್ಲು ನರಸೀಪುರದ ತಾಲ್ಲೂಕು ತಿರುಮಕೂಡ್ಲು ಸ್ಥಳದ ಸದರಿ ತಿಪ್ಪಯ್ಯನವರು ಸದರಿ ವಾಸಸ್ಥರಾಗಿ ಮೃತಪಟ್ಟ ಗುರುಮೂರ್ತಿಜೋಯಿಸರ ಜಿಂದಗಿ ಬಗ್ಯಾಗಿ ಬರತಕ್ಕ 400 ರೂಪಾಯಿಗಳ ಸಾಲವನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾರೆ.

ಸದರೀ ದರಖಾಸ್ತುದಾರರಾದ ತಿಪ್ಪಯ್ಯನವರ ಅರ್ಜೀಯನ್ನು 1889ನೇ ಇಸವಿ ಮಾರ್ಚಿ ತಿಂಗಳು ತಾರೀಖು 18ರಲ್ಲು ಕೇಳಿ ಸರಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ವಿಮರ್ಶೇ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ಗುರುಮೂರ್ತಿಜೋಯಿಸರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯ ಪಡಿಸಿ ಇಧೆ.

1889ನೇ ಇಸವಿ ಆರ್ಜೀ ನಂಬರ್ 43.

ಮೃತಪಟ್ಟ ನಾರಾಯಣಶೆಂಗರ ಆಸ್ತೀ ವಿಷಯದಲ್ಲಿ–

ಆರ್ಜೀದಾರಳು ಕಾವೇರಿಬಾಯಮ್ಮನವರು, ಮೃತಪಟ್ಟ ಸದರೀ ನಾರಾಯಣಶೆಂಗರಿಗೆ ಹೆಂಡತಿ ಆಗಬೇಕೆಂಬ ಹಕ್ಕುದಾರಿ ಮೇಲೆ ಮೈಸೂರು ದೇವರಾಜಮೊಹಲಾ ಸ್ಥಳದ ಸದರಿ ಕಾವೇರಿಬಾಯಮ್ಮನವರು ಸದರಿ ವಾಸಸ್ಥರಾಗಿ ಮೃತಪಟ್ಟ ನಾರಾಯಣಶೆಂಗರ ಜಿಂದಗಿ ಬಗ್ಯಾಗಿ ಬರತಕ್ಕ 600 ರೂಪಾಯಿಗಳ ಸಾಲಗಳನ್ನು ವಸೂಲ್ ಮಾಡುವದಕ್ಕೆ 1860ನೇ ಇಸವಿ 27ನೇ ಆಕ್ಟ್ ಮೇರಿಗೆ ಸರಟಿಫಿಕೇಟ್ ಬಗ್ಯೆ ಈ ಕೋರ್ಟಿಗೆ ಖಾಯಿಷ್ ಮಾಡಿರುತ್ತಾಳೆ.

ಸದರೀ ದರಖಾಸ್ತುದಾರಳಾದ ಕಾವೇರಿಬಾಯ್ಯಮ್ಮನವರ ಅರ್ಜೀಯನ್ನು 1889ನೇ ಇಸವಿ ಮಾರ್ಚಿ ತಿಂಗಳು ತಾರೀಖು 18ರಲ್ಲು ಕೇಳಿ ಸರಟಿಫಿಕೇಟ್ ಪಡೆಯತಕ್ಕ ಬಾಧ್ಯತೆಯನ್ನು ಹಾಸನದ ಪೊಕ್ಕಾಮಿನಲ್ಲಿ ವಿಮರ್ಶೇ ಮಾಡಲ್ಪಡುತ್ತೆ. ಆ ಕಾಲದಲ್ಲಿ ಸದರೀ ಮೃತಪಟ್ಟ ನಾರಾಯಣಶೆಂಗರ ಆಸ್ತಿಗೆ ಹಕ್ಕುದಾರರಾದ ವಿಸಿಷ್ಟರೂ ಈ ಕೋರ್ಟಿನಲ್ಲಿ ಹಾಜರ್ ಇರಬೇಕೆಂದು ಇದರಿಂದ ತಿಳಿಯಪಡಿಸಿ ಇಧೆ.

1889ನೇ ಇಸವಿ ಫಿಬ್ರವರಿ 16ನೇ ತಾರೀಖಿನಲ್ಲಿ ಕೋರ್ಟು ಮೊಹರಿನಿಸಿ ನಮ್ಮ ವಸ್ತ ಖತ್ತೊಡನೆ ಕೊಡೋಣಾಗಿಧೆ.

ಎಸ್. ಜೀವಾಜಿರಾವ್,

ಡಿಸ್ಟ್ರಿಕ್ಟ್ ಜಡ್ಜ.

ಮೈಸೂರು ಡಿಸ್ಟ್ರಿಕ್ಟು ಸೆಶನ್ ಜಡ್ಜಿಯವರ ಕೋರ್ಟಿನಲ್ಲಿ.

ದಿವಾಳಿಯಾದ ಡಿಕ್ರೀ ದೇಣೀದಾರಳು ಮೈಸೂರು ದೇವರಾಜ ಮೊಹಲ್ಲಾದಲ್ಲಿರುವ ಜಯನಾಬೀ ಯಂಬವಳ ವಿಷಯದಲ್ಲಿ—

ಸ್ನ 1888ನೇ ಇಸವಿ ದಿವಾಳೀ ಕೇಸ್ ನಂಬರು 366.

ಹುಕುಂ.

ವೇಲ್ಲಂಡ ಜಯನಾಬೀ ಯಂಬವಳು ನಿರ್ಬಂಧದಿಂದ ಖುಲಾಸೆಯಾಗಬೇಕೆಂದು ಕೊಟ್ಟ ಆರ್ಜೀ ಅಂಶವು ಈ ಕೋರ್ಟು ರೂಬರೂ ಆರ್ಜೀದಾರಳಾದ ಜಯನಾಬಿಯು ಖುದ್ದುಹಾಜರು. ಮತ್ತು ಸದರೀ ಯವಳ ಲೇಣೀದಾರ್‌ರಾದ 1ನೇ ಫಾತ್ಮಾಬಿ 2ನೇ ಫಾತ್ಮಾಟಿ 3ನೇ ಹಯಾತ್‌ಬಿ 5ನೇ ಹಯಾತ್‌ಸಾಬಿ 7ನೇ ಮಹಮ್ಮದಿಹುಸೇ ಯಿವರಿಗೂ ದರ್ಯಾಫ್ತ್ ಮಾಡಲ್ಪಟ್ಟಿತು.